# ‘ಸ್ವಾತಂತ್ರ್ಯ’ ಎಂಬ ಹಿತ–ಮಿತ ಅಭಿವ್ಯಕ್ತಿ ಸ್ವಾತಂತ್ರ್ಯ

**ಸ್ವಾತಂತ್ರ್ಯ ಎಂಬುದು ಒಂದು ಸ್ವತಂತ್ರವಾದ ‘ಸಂಪಾದನೆ’. ಸಮಕಾಲೀನ ಕಲೆಯ ಸ್ವಾಯತ್ತ ಗುಣಕ್ಕೆ ಎರವಾಗುವ ಅಥವಾ ಭಿನ್ನವೂ ಆಗುವ ಸಮಾಜೋ ರಾಜಕೀಯ ಆಗುಹೋಗುಗಳಿಗೆ ದೃಶ್ಯ ಭಾಷೆಯ ಮತ್ತು ಅದರ ವ್ಯಾಖ್ಯಾನದ ಭಾಷೆಯ ಮೂಲಕ ಪ್ರತಿರೋಧ ಸೃಷ್ಟಿಸುವುದೂ ನಿಜವಾದ ಸ್ವಾತಂತ್ರ್ಯ.**

■ **ಎಚ್.ಎ. ಅನಿಲ್ ಕುಮಾರ್**
ಲೇಖಕರು ಕಲಾವಿದ ಹಾಗೂ ಕಲಾಮೀಮಾಂಸೆ ಬೋಧಕ

ಅಮೃತ ಮಥನ

ಕೂಡು ಕುಟುಂಬದಿಂದ ಸ್ವತಂತ್ರಗೊಂಡು ಸಣ್ಣಪುಟ್ಟ ಕುಟುಂಬಗಳಾಗಿ ಬದುಕುವುದು ಅಕ್ಷಮ್ಯ ಎಂಬ ನಂಬಿಕೆ ನನ್ನ ಬಾಲ್ಯಕಾಲದವರೆಗೂ, ಅಂದರೆ 1970ರ ದಶಕದವರೆಗೂ, ನಮ್ಮ ಸುತ್ತಲೂ ಚಾಲ್ತಿಯಲ್ಲಿತ್ತು. ಇದೇ ವಿಷಯವನ್ನು ಒತ್ತಿ ಹೇಳುವ ರಾಜಕುಮಾರ್ ಮತ್ತು ಅಂಬರೀಶ್ ಒಟ್ಟಿಗೆ ನಟಿಸಿರುವ ‘ಒಡಹುಟ್ಟಿದವರು’ ಸಿನಿಮಾ 1990ರ ದಶಕದಲ್ಲಿ ಬರುವಷ್ಟರಲ್ಲಿ ಕೂಡು ಕುಟುಂಬದ ಕಲ್ಪನೆ ಸಂಗ್ರಹಾಲಯ ಸೇರಿದ್ದಾಗಿತ್ತು. ಕೇವಲ ಕಲೆಯ/ಕಲಾವಿದರ ‘ಸ್ವಾಯತ್ತತೆ’ ಅಥವಾ ‘ಅಭಿವ್ಯಕ್ತಿ ಸ್ವಾತಂತ್ರ್ಯ’ದಿಂದಾಗಿ ಈ ಕಲಾಕೃತಿ ಊರ್ಜಿತಗೊಂಡಿತ್ತು. ನಾನು ದೃಶ್ಯಕಲಾರಂಗದ ಭಾಗವಾದ ನಂತರ ‘ಸ್ವಾತಂತ್ರ್ಯ’ ಎಂಬ ಪದದ ವಿರುದ್ಧವಾಗಿ ಏನೇ ಬಳಕೆ ಆದರೂ ಅದು ಕೆಟ್ಟದ್ದು ಎಂಬ ನಂಬಿಕೆಯೂ ನನ್ನಂತವರ ಇದೇ ಮನಸ್ಸಿನೊಳಗೆ ಇಳಿದುಬಿಟ್ಟಿತ್ತು. ಆಶಿಶ್ ನಂದಿ ಅಂತಹವರು, ‘ಪ್ರಜಾಪ್ರಭುತ್ವ ಭಾರತ’ದಲ್ಲಿ ಇನ್ನೂ ಊಳಿಗಮಾನ್ಯ ಪದ್ಧತಿಯಿಂದ ಸ್ವಾತಂತ್ರ್ಯ ಲಭ್ಯವೇ ಆಗಿಲ್ಲ ಎಂದು ಖಾಸಗಿ ಒಡೆತನಗಳನ್ನು ಉದಾಹರಿಸಿದ್ದರು – ಥಿಯೋಸಾಫಿಕ್ ಸೊಸೈಟಿಯಲ್ಲಿ, 1990ರ ಆರಂಭದಲ್ಲಿ. ಅದು ಆಗಷ್ಟೇ ಬೆಂಗಳೂರಿಗೆ ಐ.ಟಿ ಆಗಮಿಸುತ್ತಿದ್ದ ಕಾಲ. ‘ವಿಡಿಯೊ ಕಲೆ’ ಪ್ರಕಾರದ ವಿಡಿಯೊ ಒಂದರಲ್ಲಿ, ವಲಸಿಗನೊಬ್ಬನನ್ನು ವಿಡಿಯೊ ಮಾಡುವಾಗ ಆತ ಪ್ರತಿರೋಧ ವ್ಯಕ್ತಪಡಿಸುತ್ತಾನೆ. ‘ನಿನ್ನನ್ನು ದಾಖಲಿಸುವುದು ನನ್ನ ಅಭಿವ್ಯಕ್ತಿ ಸ್ವಾತಂತ್ರ್ಯ, ನೀನು ಅದನ್ನು ವಿರೋಧಿಸುವಂತಿಲ್ಲ’ ಎನ್ನುತ್ತಾನೆ ವಿಡಿಯೊ ಕಲಾವಿದ, ಅದೊಂದು ತಂತ್ರಗಾರಿಕೆ ಎಂಬಂತೆ. ‘ನಿನ್ನ ವಿಡಿಯೊದ ಭಾಗ ಆಗುವುದು ಬಿಡುವುದು ಸಹ ನನ್ನ ಸ್ವತಂತ್ರ ನಿರ್ಧಾರ

